**ಸಾಕ್ಷಿಯನ್ನು ದಿನಾಂಕಃ 29.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಜಿ.ಎಸ್.ಆರ್. ವಕೀಲರಿಂದಃ**

ನಮಗೆ ಜಮೀನಿನಿಂದ ಬಂದ ಆಧಾಯದ ಬಗ್ಗೆ ಯಾವುದೇ ದಾಖಲೆ ಇರುವುದಿಲ್ಲ. ನಮ್ಮ ಜಮೀನಿನಿಂದ ಬಂದ ಬೆಳೆಯನ್ನು ಮಾರಾಟ ಮಾಡಿದ ಬಗ್ಗೆ ಯಾವುದೇ ರಶೀದಿ ನೀಡಿರುವುದಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ ಮತ್ತು ಯಾವುದೇ ಆರ್.ಟಿ.ಸಿ. ಸಹ ಇರುವುದಿಲ್ಲ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲವಾದ್ದರಿಂದ ನನಗೆ ಯಾವುದೇ ಆಧಾಯದ ಮೂಲ ಇರುವುದಿಲ್ಲ ಎಂದರೆ ಸರಿಯಲ್ಲ. ನಾವು ಬಿ.ಪಿ.ಎಲ್. ಕಾರ್ಡ್ ಹೊಂದಿರುತ್ತೇವೆ. ನನಗೆ ಯಾವುದೇ ಆಧಾಯದ ಮೂಲ ಇಲ್ಲದೇ ಇದ್ದು ನಾನು ಪಿರ್ಯಾದಿನಲ್ಲಿ ತಿಳಿಸಿರುವಂತೆ ಆರೋಪಿಗೆ ರೂ. 5,00,000/- ಹಣವನ್ನು ಕೊಡುವಷ್ಟು ಯಾವುದೇ ಆರ್ಥಿಕ ಸಾಮರ್ಥ್ಯ ಇದ್ದಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ನನ್ನ ಸಹೋದರ ಹಾಗು ನನ್ನ ತಂದೆ ಅನ್ಯೋನ್ಯವಾಗಿರುತ್ತೇವೆ. ನನ್ನ ತಂದೆ ಬಡ್ಡಿಯ ಮೇಲೆ ಸಾಲ ಕೊಡುವ ವ್ಯವಹಾರ ಮಾಡುತ್ತಾರೆಂದರೆ ಸರಿಯಲ್ಲ. ನನ್ನ ತಂದೆ ಮಹೇಶ್ ಎನ್ನುವವರಿಗೆ ಬಡ್ಡಿಯ ಮೇಲೆ ಸಾಲ ಕೊಟ್ಟ ಸಂಬಂಧ ಇದೇ ನ್ಯಾಯಾಲಯದಲ್ಲಿ ದಾವೆ ಇರುತ್ತದೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನಗೆ ಆ ವಿಚಾರದ ಬಗ್ಗೆ ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿಯ ಅಣ್ಣನಾದ ಎಲ್. ತಾಂಡವಮೂರ್ತಿರವರ ಪರಿಚಯವಿರುತ್ತದೆ. ಸಾಕ್ಷಿ ಮುಂದುವರಿದು ಈಗ ಅವರು ಮೃತರಾಗಿರುತ್ತಾರೆಂದು ನುಡಿಯುತ್ತಾರೆ. ಸದರಿ ತಾಂಡವಮೂರ್ತಿಗೆ ಬದುಕಿದ್ದಾಗ

ಅವರಿಗೆ ಹಣದ ಅವಶ್ಯಕತೆ ಇದ್ದು ಆ ಸಂಬಂಧ ಅವರು ಆರೋಪಿಯ ಮೂಲಕ ನನ್ನ ತಂದೆಯನ್ನು ಸಂಪರ್ಕಿಸಿ ರೂ. 5,00,000/- ಸಾಲ ಕೇಳಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆಗ ನನ್ನ ತಂದೆ ಅಷ್ಟೊಂದು ಹಣ ತನ್ನಲ್ಲಿ ಇರುವುದಿಲ್ಲವೆಂದು ಸದರಿ ಹಣವನ್ನು ನನ್ನ ಸೋದರನಾದ ರಾಮುರವರ ಮೂಲಕ ವ್ಯವಸ್ಥೆ ಮಾಡಿಸಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆಗ ನನ್ನ ಸಹೋದರ ಅದಕ್ಕೆ ಒಪ್ಪಿ ತಾಂಡವಮೂರ್ತಿರವರ ಜಮೀನನ್ನು ಭೋಗ್ಯಕ್ಕೆ ಹಾಕಿಸಿಕೊಂಡು ರೂ. 5,00,000/- ಹಣವನ್ನು ಮಾಸಿಕ ಶೇಕಡಾ 1 ರ ಬಡ್ಡಿಯ ಮೇಲೆ ಸಾಲ ನೀಡಲು ಒಪ್ಪಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಸಾಲಕ್ಕೆ ಆರೋಪಿಯು ಜಾಮೀನುದಾರರಾಗಿರುತ್ತಾರೆಂದರೆ ಆ ಬಗ್ಗೆಯೂ ಸಹ ನನಗೆ ಗೊತ್ತಿರುವುದಿಲ್ಲ. ಸದರಿ ಸಾಲದ ಭದ್ರತೆಗಾಗಿ ನನ್ನ ಅಣ್ಣನಾದ ರಾಮುರವರು ಸದರಿ ತಾಂಡವಮೂರ್ತಿಯಿಂದ ಸಹಿ ಮಾಡಿದ ಒಂದು ಖಾಲಿ ಸ್ಟಾಂಪ್ ಪೇಪರ್ ಹಾಗು ಆರೋಪಿಯಿಂದ ಸಹಿ ಮಾಡಿದ ಖಾಲಿ ಚೆಕ್ ಅನ್ನು ಪಡೆದುಕೊಂಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆ ರೀತಿ ನನ್ನ ಅಣ್ಣ ಭದ್ರತೆಗಾಗಿ ದಾಖಲೆಗಳನ್ನು ಪಡೆದು ದಿನಾಂಕಃ 17.06.2019 ರಂದು ಭೋಗ್ಯ ಪತ್ರದ ಬದಲಾಗಿ ಭದ್ರತೆಗಾಗಿ ಕ್ರಯ ಒಪ್ಪಂದದ ಕರಾರು ಪತ್ರ ಬರೆಸಿಕೊಂಡಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಂತರ ನನ್ನ ಅಣ್ಣ ಸದರಿ ಮೇಲೆ ಹೇಳಿದ ವ್ಯವಹಾರದ ಸಂಬಂಧ ಭದ್ರತೆಗಾಗಿ ಪಡೆದ ನಿ.ಪಿ.-1 ಖಾಲಿ ಚೆಕ್ ಅನ್ನು ನನಗೆ ಕೊಟ್ಟು ನನ್ನ ಮೂಲಕ ಆರೋಪಿಯ ವಿರುದ್ದ ಈ ಸುಳ್ಳು ಪ್ರಕರಣ ಹೂಡಿರುತ್ತಾರೆಂದರೆ ಸರಿಯಲ್ಲ. ನಾನು ಆರೋಪಿಗೆ ಕಳುಹಿಸಿದ ನೋಟೀಸ್ ಗೆ ಅವರು ಪ್ರತ್ಯುತ್ತರ ನೀಡಿರುತ್ತಾರೆಂದರೆ ಸರಿ. ಸದರಿ

ಪ್ರತ್ಯುತ್ತರದಲ್ಲಿ ಮೇಲೆ ಹೇಳಿದ ಎಲ್ಲಾ ಅಂಶವನ್ನು ಆರೋಪಿ ತಿಳಿಸಿರುತ್ತಾರೆಂದರೆ ಸರಿ. ಅಲ್ಲದೇ ಸದರಿ ಪ್ರತ್ಯುತ್ತರದಲ್ಲಿ ನನ್ನ ಅಣ್ಣ ಕ್ರಯದ ಒಪ್ಪಂದ ಕರಾರು ಪತ್ರದ ಮೇಲೆ ಕಳುಹಿಸಿದ ನೋಟೀಸ್ ಗೆ ಉತ್ತರ ಕೊಟ್ಟಾಗ ಸದರಿ ಉತ್ತರದಲ್ಲಿಯೂ ಸಹ ನಿ.ಪಿ.–1 ಚೆಕ್ ಅನ್ನು ನನ್ನ ಅಣ್ಣ ಹಾಗು ತಾಂಡವಮೂರ್ತಿ ನಡುವೆ ಆದ ಹಣದ ವ್ಯವಹಾರದ ಬಗ್ಗೆ ಆರೋಪಿಯು ಜಾಮೀನುದಾರನಾಗಿ ಭದ್ರತೆಗಾಗಿ ನಿ.ಪಿ.–1 ಚೆಕ್ ಅನ್ನು ನೀಡಿರುವುದಾಗಿ ಈ ಪ್ರಕರಣ ಹೂಡುವ ಮೊದಲೇ ಸದರಿ ಪ್ರತ್ಯುತ್ತರದಲ್ಲಿ ತಿಳಿಸಿರುತ್ತಾರೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿ.ಪಿ.–1 ರಲ್ಲಿರುವ ಬರವಣಿಗೆಗೂ ಹಾಗು ಅದರಲ್ಲಿರುವ ಆರೋಪಿಯ ಸಹಿಯ ಅಕ್ಷರಕ್ಕೂ ವ್ಯತ್ಯಾಸವಿರುತ್ತದೆಂದರೆ ಸಾಕ್ಷಿಯು ನನಗೆ ಆ ರೀತಿಯ ಅಷ್ಟೊಂದು ವ್ಯತ್ಯಾಸಗಳು ಕಾಣಿಸುತ್ತಿಲ್ಲವೆಂದು ನುಡಿಯುತ್ತಾರೆ. ಆ ರೀತಿ ವ್ಯತ್ಯಸಾವಿದ್ದಾಗ್ಯೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅದೇ ರೀತಿ ನಿ.ಪಿ.–1 ಚೆಕ್ ನಲ್ಲಿರುವ ಸಹಿ ಹಾಗು ಇತರ ಬರವಣಿಗೆಯ ಶಾಹಿಗೆ ವ್ಯತ್ಯಾಸವಿದೆ ಎಂದರೆ ಸಾಕ್ಷಿ ಅದನ್ನು ಆರೋಪಿಯೇ ಬರೆದುಕೊಟ್ಟಿರುತ್ತಾರೆಂದು ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ನನ್ನ ಹಾಗು ಆರೋಪಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಹಾಗು ನಾನು ಆರೋಪಿಗೆ ಯಾವುದೇ ಸಾಲವನ್ನು ನೀಡಿರುವುದಿಲ್ಲ ಹಾಗು ಆ ಸಂಬಂಧ ಆರೋಪಿ ನನಗೆ ನಿ.ಪಿ.–1 ರಂತೆ ಯಾವುದೇ ಚೆಕ್ ಅನ್ನು ನೀಡಿರುವುದಿಲ್ಲ ಬದಲಾಗಿ ಮೇಲೆ ಹೇಳಿದಂತೆ ನನ್ನ ಅಣ್ಣ ಹಾಗು ಆರೋಪಿಯ ಅಣ್ಣನಾದ ತಾಂಡವಮೂರ್ತಿಯವರ ನಡುವೆ ನಡೆದ ಹಣಕಾಸಿನ ವ್ಯವಹಾರದಲ್ಲಿ ಆರೋಪಿಯು ಜಾಮೀನುದಾರನಾಗಿ ನೀಡಿದ ನಿ.ಪಿ.–1 ಖಾಲಿ ಚೆಕ್ ಅನ್ನು ನನ್ನ ಅಣ್ಣನಾದ ರಾಮು

ನನಗೆ ನೀಡಿ ನಾನು ಹಾಗು ನನ್ನ ಅಣ್ಣ ಶಾಮೀಲಾಗಿ ಅಕ್ರಮ ಹಣ ಗಳಿಸುವ ಸಲುವಾಗಿ ಆರೋಪಿಯ ವಿರುದ್ದ ಈ ಸುಳ್ಳು ಪ್ರಕರಣವನ್ನು ಹೂಡಿರುತ್ತೇವೆಂದರೆ ಸರಿಯಲ್ಲ. ಆರೋಪಿಯು ನಿ.ಪಿ.–1 ರಲ್ಲಿರುವ ತಿಳಿಸಿರುವ ಯಾವುದೇ ಹಣವನ್ನು ನೀಡಲು ಭಾಧ್ಯಸ್ಥರಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**